

ವರ್ಕ್ ಉಡುಪುಗಳಿಗೆ ಮ್ಯಾಚಿಂಗ್ ಮಾಡಲು ಪಚ್ಚೆ ಕಲ್ಲು ಇರುವ ಆ್ಯಂಟಿಕ್ ಸಿಲ್ವರ್ ಜುಮ್ಕಿ, ಮಲ್ಟಿಕಲರ್ ಒಡವೆ ಸೆಟ್‌ಗಳು ಉತ್ತಮ ಸಾಥ್ ನೀಡಬಹುದು.

ಕಡು ಹಸಿರು ರೇಡಿಯಂಟ್ ಬಣ್ಣದ ಎಮರಾಲ್ಡ್ ಒಡವೆ, ಧರಿಸುವವರ ಮತ್ತು ನೋಡುಗರ ಮನಸ್ಸಿಗೆ ಸಂತೋಷ ಉಂಟುಮಾಡುವಂಥವು. ಜೆಮ್‌ಸ್ಟೋನ್ ಆಗಿರುವ ಪಚ್ಚೆಯನ್ನು ಚಿನ್ನದ ಬಳೆ, ಕಿವಿಯೋಲೆ, ನೆಕ್ಲೇಸ್, ಬ್ರೇಸ್‌ಲೆಟ್‌ಗಳಲ್ಲಿ ಅಳವಡಿಸಿ ಧರಿಸಿದರೆ ಎಲಿಗೆಂಟ್ ಲುಕ್ ಕೊಡುತ್ತದೆ.

ಬೆಂಗಳೂರಿನಲ್ಲಿ ನವರತನ್ ಜ್ಯುವೆಲ್ಲರಿ ಸಾಂಪ್ರದಾಯಿಕತೆಗೆ ಆಧುನಿಕ ಸ್ಪರ್ಶ ಹಾಗೂ ಮೆರುಗನ್ನು ನೀಡುವ ಎಮರಾಲ್ಡ್ ಕಲೆಕ್ಷನ್ ಅನ್ನು ಹೊರತಂದಿದೆ. ಕಿವಿಯೋಲೆ, ಬಳೆ, ಉಂಗುರ, ಪೆಂಡೆಂಟ್ ಹೀಗೆ ಪ್ರತಿಯೊಂದು ಒಡವೆಗೂ ವಿಭಿನ್ನ ಹಾಗೂ ನವೀನ ವಿನ್ಯಾಸದ ಟಚ್ ಕೊಡಲಾಗಿದ್ದು, ನೋಡಲು ಆಕರ್ಷಕವಾಗಿದೆ. ಚಿನ್ನ ಹಾಗೂ ಮುತ್ತುಗಳಿಂದ ಅಲಂಕೃತವಾದ ಎಮರಾಲ್ಡ್ ಒಡವೆಯನ್ನು ಯುವತಿಯರ ಆಸಕ್ತಿ ಹಾಗೂ ಅಭಿಲಾಷೆಯನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ.

‘ಭಾರತೀಯ ಒಡವೆ ಸಾಮ್ರಾಜ್ಯದಲ್ಲಿ ಜೆಮ್‌ಸ್ಟೋನ್‌ಗೆ ಬಹಳ ಪ್ರಾಮುಖ್ಯತೆ ಇದೆ. ದಯೆ, ನಂಬಿಕೆ ಮತ್ತು ಶುದ್ಧತೆಯನ್ನು ಈ ಹಸಿರು ಹರಳು ಪ್ರತಿನಿಧಿಸುತ್ತದೆ. ಅಲ್ಲದೆ ಹಸಿರು ಸಮೃದ್ಧಿಯ ಸಂಕೇತವೂ ಆಗಿರುವುದರಿಂದ ಎಲ್ಲ ಮಹಿಳೆಯರು ಇದನ್ನು ಇಷ್ಟಪಡುತ್ತಾರೆ. ಹೀಗಾಗಿ ಹಲವು ವಿನ್ಯಾಸಗಳಲ್ಲಿ ಎಮರಾಲ್ಡ್ ಸಂಗ್ರಹವನ್ನು ಹೊರತಂದಿದ್ದೇವೆ’ ಎಂದು ಹೇಳುತ್ತಾರೆ ನವರತನ್ ಜ್ಯುವೆಲ್ಲರಿಯ ಮುಖ್ಯಸ್ಥರಾದ ರಾಹುಲ್ ಜೈನ್. ‘ ಈ ಜೆಮ್‌ಸ್ಟೋನ್ ಒಡವೆ ನಮ್ಮ ಶ್ರೀಮಂತ ಪರಂಪರೆಯನ್ನೂ ಪ್ರತಿನಿಧಿಸುತ್ತದೆ. ಇದಕ್ಕಾಗಿ ರಾಯಲ್ ಡಿಸೈನ್, ಕ್ರಾಫ್ಟಮನ್‌ಶಿಪ್ ಹಾಗೂ ಆ್ಯಂಟಿಕ್ ಟೆಕ್ನಿಕ್‌ಗಳನ್ನು ಉಪಯೋಗಿಸಿ ಒಡವೆ ತಯಾರಿಸಲಾಗಿದೆ. ಮದುವೆಯಂತಹ ಶುಭ ಸಮಾರಂಭಗಳಿಗಾಗಿಯೇ ವಿಶೇಷವಾಗಿ ಹಲವು ವಿನ್ಯಾಸದ ಒಡವೆಗಳನ್ನು ರೂಪಿಸಿದ್ದೇವೆ’ ಎಂದೂ ಹೇಳುತ್ತಾರೆ ರಾಹುಲ್ ಜೈನ್. ■



# ಕಾಸಿನ ಸರ

**ಕಾಸಿನ ಸರ, ಅವಲಕ್ಕಿ ಹಾರ, ಕೊತ್ತಂಬರಿ ಮಾಲೆ, ಗೆಜ್ಜೆಮಾಲಾಕ್... ಮುಂತಾದವು ಅಜ್ಜಿಕಾಲದ ಒಡವೆಗಳಾದರೂ ಇಂದಿಗೂ ಫ್ಯಾಷನ್‌ಪ್ರಪಂಚದಲ್ಲಿ ಟ್ರೆಂಡ್ ಆಗಿಬಿಟ್ಟವೆ. ಹಳೆಯ ಆಭರಣಗಳಿಗೆ ಹೊಸ ರೂಪ ಬಂದು ಸಖತ್ ಸದ್ದು ಮಾಡುತ್ತಿದೆ.**

ಕಡುಬಣ್ಣದ ರೇಷ್ಮೆಲಂಗ ತೊಟ್ಟ ಪುಟ್ಟ ಹುಡುಗಿ ಕತ್ತಲ್ಲಿ ಮಿರಿಮಿರಿ ಮಿಂಚುವ ಕಾಸಿನ ಸರ ಕಂಡಾಗ ಅಜ್ಜಿಯ ಸುಕ್ಕುಮುಖದಲ್ಲಿಯೂ ಚಂದದ ಮಂದಹಾಸ!. ಹಳೆಯಕಾಲದ ಒಡವೆಯಾದ ಕಾಸಿನ ಸರ ಇದೀಗ ಫ್ಯಾಷನ್ ಲೋಕಕ್ಕೆ ಆಧುನಿಕ ರೂಪದಲ್ಲಿ ಕಾಲಿಟ್ಟಿದೆ. ಹಳೆಯ ಕಾಲದ ಒಡವೆಗಳನ್ನು ಜತನವಾಗಿ ಕಾಪಿಟ್ಟುಕೊಂಡಿರುವ ಮನೆಗಳಲ್ಲಿರುವ ತಿಜೋರಿಯನ್ನೊಮ್ಮೆ ನೋಡಿ. ಅಲ್ಲಿ ಒಡ್ಯಾಣ, ಡಾಬು, ಬಳೆ, ಕಿವಿಯೋಲೆಗಳ ಮಧ್ಯೆ ಸುಂದರವಾದ ಕಾಸಿನ ಸರ ಇದ್ದೇ ಇರುತ್ತದೆ. ಇದರ ಜೊತೆಗೆ ಫಳಫಳ ಮಿಂಚುವ ಉದ್ದನೆಯ ಹಾರವೂ ಇದ್ದು, ಅದೀಗ ಮದುವೆ, ಮುಂಜಿಗಳಂತಹ ಸಮಾರಂಭಗಳಲ್ಲಿ ಎಳೆಹುಡುಗಿಯರ ಕೊರಳನ್ನು ಅಲಂಕರಿಸುತ್ತಿದೆ. ಚಂದದ ನೆಕ್ಲೇಸ್, ಅಂದದ ಬಳೆಗಳು ಆಧುನಿಕತೆಯ ಛಾಪಿನೊಂದಿಗೆ ಮತ್ತೆ ಪ್ರತ್ಯಕ್ಷವಾಗಿದೆ. ಜಮಾನದ ಒಡವೆಗಳೆಲ್ಲಾ ಈಗ ಮತ್ತೆ ಫ್ಯಾಷನ್ ಪ್ರಪಂಚದಲ್ಲಿ ಸ್ಥಾನಮಾನ ಪಡೆದಿವೆ.

ಸಾಂಪ್ರದಾಯಿಕ ಹಬ್ಬಕ್ಕೆ ಪಾರಂಪರಿಕೆ ಒಡವೆಗಳು ಸಾಥಿ ಕೊಡುತ್ತಿವೆ, ಅದೂ ಆಧುನಿಕ ಟ್ರೆಂಡ್‌ನೊಂದಿಗೆ. ಹೆರಿಟೇಜ್ ಆಭರಣಗಳು ಆಧುನಿಕ ಸ್ಪರ್ಶದೊಂದಿಗೆ ಹೆಂಗಳೆಯರ ಮನತಣಿಸುತ್ತಿದೆ. ಸಂಪ್ರದಾಯ ಲಾಗಾಯ್ತಿನದ್ದಾದರೂ ಅದು ಎಂದಿಗೂ ಫ್ಯಾಷನ್‌ನೊಂದಿಗೆ ಅವಿನಾಭಾವ ಸಂಬಂಧ ಇಟ್ಟುಕೊಂಡಿದೆ ಎಂಬುದಕ್ಕೆ ‘ಕಾಸಿನ ಸರ’ವೇ ಸಾಕ್ಷಿ. ಪಾರಂಪರಿಕ ಲುಕ್ ಇದ್ದರೂ ಸಮಕಾಲೀನ ಟ್ರೆಂಡ್‌ನೊಂದಿಗೆ ಯುವತಿಯರ ಮನತಣಿಸುತ್ತಿದೆ. ಕಾಸಿನ ಸರದ ಜೊತೆಗೆ ಲಕ್ಷ್ಮಿಯ ಪ್ರತಿರೂಪವಿರುವ ಬ್ರೇಸ್‌ಲೆಟ್, ನೆಕ್ಲೇಸ್ ಕೂಡ ಜನಪ್ರಿಯವಾಗಿದೆ.

‘ಅನಾದಿ ಕಾಲದ ಒಡವೆಗೆ ಆಧುನಿಕ ರೂಪ ನೀಡುವುದಾದರೂ ಪರಂಪರೆಗೆ ಕೊಂಚವೂ ಧಕ್ಕೆಯಾಗದಂತೆ ನೋಡಿಕೊಳ್ಳುತ್ತೇವೆ. ಏಕೆಂದರೆ ಒಡವೆ ಜೊತೆಗೆ ಭಾವನಾತ್ಮಕ ಸಂಬಂಧವೂ ಹಾಸುಹೊಕ್ಕಾಗಿರುವ ಕಾರಣ ಮನದ ಭಾವನೆಗಳು ಒಡವೆಯಲ್ಲಿ ಪ್ರತಿಬಿಂಬಿಸಬೇಕು ಎಂಬುದೇ ನಮ್ಮ ಉದ್ದೇಶ ಎನ್ನುತ್ತಾರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಜ್ಯುವೆಲ್ಲರಿ ವರ್ತಕ ಪವನ್ ಚಂದನ್‌ಕುಮಾರ್.

## ಕತ್ತು ತುಂಬ ಗೆಜ್ಜೆಮಾಲಾಕ್!

ಕಾಸಿನ ಸರದಂತೆಯೇ ಗೆಜ್ಜೆಮಾಲಾಕ್ ಕೂಡ ಅಜ್ಜಿ ಕಾಲದ್ದೇ. ಆದರೆ ಇದು ಇಂದು ಫ್ಯಾಷನ್‌ಟ್ರೆಂಡ್ ಆಗಿ ವಿಜೃಂಭಿಸುತ್ತಿದೆ. ಇದರ ಜೊತೆಗೆ ಚಿನ್ನದ ಅಡಿಪಾಯವಿರುವ ಒಡವೆಗೆ ಅಮೆರಿಕನ್ ಡೈಮಂಡ್, ಕಲರ್ ಡೈಮಂಡ್, ಮುತ್ತು, ಹವಳ, ನೀಲ ಪಚ್ಚೆ ಮುಂತಾದ ನವರತ್ನಗಳನ್ನು ಸೇರಿಸಿ ಕಸೂತಿ ವಿನ್ಯಾಸದಲ್ಲಿ ಸಿದ್ಧಪಡಿಸಿದ ಒಡವೆ ಇಂದಿನ ಹೊಸ ಫ್ಯಾಷನ್ ಟ್ರೆಂಡ್. ಕಂಠಿಹಾರ, ಅವಲಕ್ಕಿ ಸರ, ಕೊತ್ತಂಬರಿ ಸರ, ಜುಮುಕಿ, ಕಿವಿಯೋಲೆಗಳಲ್ಲದೆ ಹಳೆಯ ಬೆಳ್ಳಿಯ ಒಡವೆ ಕೂಡ ಹೊಸ ವಿನ್ಯಾಸ ಪಡೆದುಕೊಳ್ಳುತ್ತಿದೆ.

■ ಯು. ವೇಣೂರು